ಅಧ್ಯಕ್ಷರು : ಅಲ್ಲಿ ನಾನು ನೋಡಿದ್ದೇನೆ, ಬಹಳ congested ಇದೆ. ಮಾನ್ಯ ಸದಸ್ಯರು ಹೇಳಿದಂತೆ ಸ್ಥಳೀಯವಾಗಿ ತಹಸೀಲ್ದಾರ್ ನೀವು ಸೇರಿಕೊಂಡು ರಸ್ತೆಯನ್ನು ಸ್ವಲ್ಪ widen ಮಾಡಿಸಿ.

ಶ್ರೀ ಮಂಕಾಳ ಸುಬ್ಬವೈದ್ಯ : ಇವರು ಕೆಲವೊಂದು ಬಸ್ಸು ಕೊಟ್ಟಿದ್ದಾರೆ, ಅವು ಹೈವೇಯಲ್ಲಿ ಕೂಡ ನಿಲ್ಲಿಸುವುದಿಲ್ಲ. ಎಲ್ಲಾ ವಿಭಾಗದ ಬಸ್ಸು ಹೈವೇಯಲ್ಲಿ ನಿಲ್ಲುವ ಹಾಗೆ ಮಾಡಬೇಕು.

ಅಧ್ಯಕ್ಷರು : ಹೈವೇಯಲ್ಲಿ ಕೂಡ ನಿಲ್ಲಿಸುವುದಕ್ಕೆ ವ್ಯವಸ್ಥೆ ಮಾಡಿ.

ಶ್ರೀ ರಾಮಲಿಂಗಾರೆಡ್ಡಿ : ಅದು ಬೇಕಾದರೆ ಮಾಡಬಹುದು.

ಅಧ್ಯಕ್ಷರು : ಮಾನ್ಯ ಪುಟ್ಟಣ್ಣಯ್ಯನವರು ಕೇಳಿರುವ ಪ್ರಶ್ನೆ ಬಹಳ ಒಳ್ಳೆಯ ಪ್ರಶ್ನೆ ಇದೆ. ಮಾನ್ಯ ಸದಸ್ಯರಾದ ಎಸ್.ಆರ್.ಮಹೇಶ್‌ರವರ 2147 ಪ್ರಶ್ನೆಯನ್ನು ನಾನೇ ಕೇಳುತ್ತೇನೆ.

ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ಮಂಜೂರಾದ ವೈದ್ಯರುಗಳ ಸಂಖ್ಯೆ

116 (2147); ಶ್ರೀ ಮಹೇಶ್ ಎಸ್,ಆರ್. (ಕೃಷ್ಣರಾಜನಗರ)

ಅ) ರಾಜ್ಯದಲ್ಲಿರುವ ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ಮಂಜೂರಾಗಿರುವ ವೈದ್ಯರುಗಳ ಸಂಖ್ಯೆ ಎಷ್ಟು;

ಆ) ಸರ್ಕಾರ ಮಂಜೂರು ಮಾಡಿರುವ ಎಲ್ಲಾ ಹುದ್ದೆಗಳಲ್ಲಿ ವೈದ್ಯರು ಕಾರ್ಯನಿರ್ವಹಿಸುತ್ತಿದ್ದಾರೆಯೇ:

ಇ) ರಾಜ್ಯದ ಬಹುತೇಕ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ವೈದ್ಯರುಗಳ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಹಾಗಿದ್ದಲ್ಲಿ ಖಾಲಿ ಇರುವ ವೈದ್ಯರ ಹುದ್ದೆಗಳನ್ನು ತುಂಬಲು ಸರ್ಕಾರಕ್ಕಿರುವ ತೊಂದರೆಗಳೆನು?

ಶ್ರೀ ಯು.ಟಿ. ಖಾದರ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ) ರಾಜ್ಯದಲ್ಲಿರುವ ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ಮಂಜೂರಾಗಿರುವ ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿಗಳ ಸಂಖ್ಯೆ: 2586

ಆ) ಮಂಜೂರಾದ ಹುದ್ದೆಗಳಲ್ಲಿ 2027 ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿಗಳು ಕರ್ತವ್ಯ ನಿರ್ವಹಿಸುತ್ತಿದ್ದಾರೆ.

ಇ) 559 ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ವೈದ್ಯರುಗಳ ಹುದ್ದೆ ಖಾಲಿ ಇದೆ.

ಈ) ಖಾಲಿ ಇರುವ ಹುದ್ದೆಗಳನ್ನು ತುಂಬಲು ಕರ್ನಾಟಕ ಲೋಕಸೇವಾ ಆಯೋಗಕ್ಕೆ ವಹಿಸಲಾಗಿದೆ ಹಾಗೂ ಗುತ್ತಿಗೆ ಆಧಾರದ ಮೇಲೆ ನೇಮಕಾತಿ ಮಾಡಲು ಎಲ್ಲಾ ಜಿಲ್ಲಾಧಿಕಾರಿಗಳಿಗೆ ಅನುಮತಿ ನೀಡಲಾಗಿದೆ.

ಅಧ್ಯಕ್ಷರು : ರಾಜ್ಯದ ಬಹುತೇಕ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ವೈದ್ಯರುಗಳ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಎಂದು ಕೇಳಿರುವಂತಹ ಪ್ರಶ್ನೆಗೆ ತಮ್ಮ ಉತ್ತರದಲ್ಲಿ 559 ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ವೈದ್ಯರುಗಳ ಹುದ್ದೆ ಖಾಲಿ ಇದೆ ಎಂದು ಕೊಟ್ಟಿದ್ದೀರಿ. ಇದು ಎಷ್ಟು ವರ್ಷಗಳಿಂದ ಖಾಲಿ ಇವೆ? ಈ ಹುದ್ದೆಗಳನ್ನು ಯಾವಾಗ ತುಂಬುತ್ತೀರಿ?

ಶ್ರೀ ಯು.ಟಿ. ಖಾದರ್ : ಮಾನ್ಯ ಅಧ್ಯಕ್ಷರೆ, ರಾಜ್ಯದಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಕಳೆದ ಹತ್ತು ವರ್ಷಗಳಿಂದ ವೈದ್ಯರ ಕೊರತೆ ಕಾಣುತ್ತಿದೆ. ಇವತ್ತು 250 ಜನ ವೈದ್ಯರುಗಳು contract basisನಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ.

ಅಧ್ಯಕ್ಷರು : ನಾನು ಕೇಳಿದ ಪ್ರಶ್ನೆಗೆ ನೇರವಾದ ಉತ್ತರವನ್ನು ಕೊಡುವುದನ್ನು ಕಲಿತುಕೊಳ್ಳಿ. 559 ಹುದ್ದೆಗಳು ಖಾಲಿಯಿವೆ ಎಂದು ಹೇಳಿದ್ದೀರಿ. ಅವು ಎಷ್ಟು ವರ್ಷಗಳಿಂದ ಖಾಲಿ ಇವೆ?

ಶ್ರೀ ಯು. ಟಿ. ಖಾದರ್ : ಮಾನ್ಯ ಅಧ್ಯಕ್ಷರೆ, ಆ 559 ಹುದ್ದೆಗಳು ಒಮ್ಮೆಲೇ ಖಾಲಿಯಾಗುವುದಿಲ್ಲ. ಕೆಲವು ವೈದ್ಯರು contractನಲ್ಲಿ ಬರುತ್ತಾರೆ, ಒಂದು ವರ್ಷ ಕೆಲಸ ಮಾಡುತ್ತಾರೆ, ನಂತರ ಬಿಟ್ಟು ಬೇರೆ ಕಡೆ ಹೋಗುತ್ತಾರೆ. ಅದು variation ಆಗುತ್ತಿರುತ್ತದೆ.

ಅಧ್ಯಕ್ಷರು : ನೀವು ಅಧಿಕಾರಕ್ಕೆ ಬಂದು ಒಂದೂವರೆ ವರ್ಷವಾಯಿತಲ್ಲ. ಈ ಒಂದೂವರೆ ವರ್ಷದಲ್ಲಿ ಎಷ್ಟು ಹುದ್ದೆಗಳು ಖಾಲಿ ಇವೆ ಎಂದು ಹೇಳಿ.

ಶ್ರೀ ಯು.ಟಿ. ಖಾದರ್ : Contract basis ಮೇಲೆ ತೆಗೆದುಕೊಳ್ಳುವ ವೈದ್ಯಾಧಿಕಾರಿಗಳ ನೇಮಕಾತಿಯನ್ನು ಸುಲಭಗೊಳಿಸಬೇಕೆನ್ನುವ ದೃಷ್ಟಿಯಿಂದ ಜಿಲ್ಲಾ ಮಟ್ಟದಲ್ಲಿ ನಮ್ಮ DHO ಮತ್ತು DC ಯವರಿಗೆ ನೇರವಾದ ಅಧಿಕಾರ ಕೊಟ್ಟಿದ್ದೇವೆ.

ಅಧ್ಯಕ್ಷರು : ಅದು ಆಮೇಲೆ ಹೇಳಿ. ಈ ಒಂದೂವರೆ ವರ್ಷ ಅವಧಿಯಲ್ಲಿ ಖಾಲಿ ಇದ್ದಂತಹ ಹುದ್ದೆ ಎಷ್ಟು?

ಶ್ರೀ ಯು.ಟಿ. ಖಾದರ್ : ಮಾನ್ಯ ಅಧ್ಯಕ್ಷರೆ, ಆ ಪ್ರಶ್ನೆಯನ್ನು ಇಲ್ಲಿ ಕೇಳಿಲ್ಲ, ಅದಕ್ಕೆ ನಾನು ನಂತರ ಉತ್ತರ ಕೊಡುತ್ತೇನೆ.

ಶ್ರೀ ಸಿ.ಎನ್. ಬಾಲಕೃಷ್ಣ : ಮಾನ್ಯ ಅಧ್ಯಕ್ಷರೆ, ಆಸ್ಪತ್ರೆ, ಡಾಕ್ಟರ್ ವಿಚಾರ ಇನ್ನು ಎಷ್ಟು ವರ್ಷದಿಂದ ಚರ್ಚೆಯಾಗಬೇಕು? ಸರ್ಕಾರ ಇದರ ಬಗ್ಗೆ ಏನಾದರೂ ಸೂಕ್ತ ಕ್ರಮ ತೆಗೆದುಕೊಳ್ಳಬೇಕು.

ಅಧ್ಯಕ್ಷರು : ಪುಟ್ಟಣ್ಣಯ್ಯನವರೇ ಕೇಳಿ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ : ಬಹಳ ಮುಖ್ಯವಾದ ಪ್ರಶ್ನೆ 559 ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ವೈದ್ಯಾಧಿಕಾರಿಗಳ ಹುದ್ದೆ ಖಾಲಿ ಇದೆ? ಅದರಲ್ಲಿ ಎಷ್ಟು ತುಂಬಿದ್ದೀರಿ, ಇನ್ನು ಎಷ್ಟು ಖಾಲಿ ಇದೆ? ಅವುಗಳನ್ನು ಯಾವ ಕಾಲಮಿತಿಯೊಳಗೆ ತುಂಬುತ್ತೀರಿ? ಅವರಿಗೆ ಎಷ್ಟು ಸಂಬಳ ಕೊಡುತ್ತೀರಿ?

ಶ್ರೀ ಯು.ಟಿ. ಖಾದರ್ : ಈಗಾಗಲೇ ನಾವು ವೈದ್ಯರುಗಳನ್ನು ಕೆಪಿಎಸ್‌ಸಿ ಮುಖಾಂತರ ನೇಮಕ ಮಾಡಲು ಅವರಿಗೆ ತಿಳಿಸಿದ್ದೇವೆ. ಮುಂದಿನ ಆರು ತಿಂಗಳೊಳಗಾಗಿ ಆ ಪ್ರಕ್ರಿಯೆಯನ್ನು ಪೂರ್ಣಗೊಳಿಸುತ್ತೇವೆಂದು ನಮಗೆ ಮಾತು ಕೊಟ್ಟಿದ್ದಾರೆ. ಈಗ ವೇತನ 57 ಸಾವಿರ ರೂಪಾಯಿ ಕೊಡುತ್ತಿದ್ದು, ಮುಂದಿನ ದಿನಗಳಲ್ಲಿ 70 ಸಾವಿರ ಕೊಡುವುದಕ್ಕೆ ಅವಕಾಶವಾಗಬಹುದು.

(ಗೊಂದಲ)

ಶ್ರೀ ಸಿ.ಎನ್. ಬಾಲಕೃಷ್ಣ : ಮಾನ್ಯ ಅಧ್ಯಕ್ಷರೆ, ಖಂಡಿತ ಪ್ರಾರಂಭದಲ್ಲಿ ಅವರಿಗೆ 57 ಸಾವಿರ ರೂಪಾಯಿ ಕೊಡುತ್ತಿಲ್ಲ.

(ಗೊಂದಲ)

ಅಧ್ಯಕ್ಷರು : ಒಬ್ಬೊಬ್ಬರು ಪ್ರಶ್ನೆಯನ್ನು ಕೇಳಿ. ಮಾನ್ಯ ವಿರೋಧ ಪಕ್ಷದ ನಾಯಕರು ಕೇಳಿ.

ಶ್ರೀ ಜಗದೀಶ್ ಶೆಟ್ಟರ್: ಮಾನ್ಯ ಅಧ್ಯಕ್ಷರೆ, ಸಚಿವರೆ ತಾವು ಒಂದೂವರೆ ವರ್ಷದಿಂದ ಮಂತ್ರಿಗಳಿದ್ದೀರಿ. ತಾವು ಕೆಪಿಎಸ್‌ಸಿಗೆ ಕೊಟ್ಟಿದ್ದೇವೆ, ನೇಮಕಾತಿ ಪ್ರಕ್ರಿಯೆ ನಡೆಯುತ್ತಿದೆ ಎಂದು ಹೇಳಿದಿರಿ. ಅವರಿಗೆ ಎಷ್ಟು ಸಂಬಳ ಕೊಡುತ್ತಿದ್ದೀರಿ ಎಂದು ಕೇಳಿದರೆ ಅದನ್ನು ಮುಂದೆ ಚಾಸ್ತಿ ಮಾಡುತ್ತೇವೆಂದು ಹೇಳುತ್ತಿದ್ದೀರಿ. ನೀವು ಮಂತ್ರಿಗಳಾಗಿ ಒಂದೂವರೆ ವರ್ಷವಾಯಿತಲ್ಲ. ಈ ಒಂದೂವರೆ ವರ್ಷದಲ್ಲಿ ಎಷ್ಟು ಹುದ್ದೆಗಳನ್ನು ತುಂಬಲಾಗಿದೆ? ವೈದ್ಯರುಗಳಿಗೆ ನೀವು ಎಷ್ಟು ವೇತನ ನಿಗದಿ ಮಾಡಿದ್ದೀರಿ? ಇದರ ವಿಚಾರದಲ್ಲಿ ಏನು ಕ್ರಮ ತೆಗೆದುಕೊಂಡಿದ್ದೀರಿ ಎನ್ನುವುದರ ಬಗ್ಗೆ ಸ್ಪಷ್ಟವಾಗಿ ಹೇಳಿ.

ಶ್ರೀ ಯು.ಟಿ. ಖಾದರ್ : ನಮ್ಮ ವಿರೋಧ ಪಕ್ಷದ ನಾಯಕರು ಕೇಳಿದ ವಿಚಾರಕ್ಕೆ ಹೇಳುವುದಾದರೆ ಹೈದರಾಬಾದ್–ಕರ್ನಾಟಕಕ್ಕೆ ಸಂಬಂಧಪಟ್ಟಂತೆ ಆರ್ಟಿಕಲ್ 371(ಜೆ) ಪ್ರಕಾರ ರೇಶಿಯೋ ಫಿಕ್ಸ್ ಮಾಡಬೇಕಾಗಿದ್ದು, ಕಾನೂನು ಸಮಸ್ಯೆಯಿರುವುದರಿಂದ ನೇರವಾಗಿ ನಾವು ಕೆ.ಪಿ.ಎಸ್.ಸಿ. ಗೆ ಕೊಡುವುದಕ್ಕೆ

ಆಗಲಿಲ್ಲ. ಹೈದರಾಬಾದ್ ಕರ್ನಾಟಕಕ್ಕೆ ಸಂಬಂಧಿಸಿದಂತೆ ಆರ್ಟಿಕಲ್ 371(ಜೆ) ಸಮಸ್ಯೆ ಬಗೆಹರಿದ ಮೇಲೆ, ಅದಕ್ಕೆ ರೇಶಿಯೋ ಫಿಕ್ಸ್ ಮಾಡಿ ತಕ್ಷಣವೇ ನಮ್ಮ ಇಲಾಖೆಯಿಂದ ನಾವು KPSCಗೆ ಆದೇಶವನ್ನು ಕೊಟ್ಟಿದ್ದೇವೆ. ಅವರು ಮುಂದಿನ ಆರು ತಿಂಗಳಿನಲ್ಲಿ ನೇಮಕಾತಿ ಪ್ರಕ್ರಿಯೆ ಮುಗಿಸಿಕೊಡುತ್ತೇವೆಂದು ಮಾತು ಕೊಟ್ಟಿದ್ದಾರೆ. ಅಲ್ಲಿಯವರೆಗೆ ಎಂ.ಬಿ.ಬಿ.ಎಸ್ ಡಾಕ್ಟರ್‌ಗಳು ಕಂಟ್ರಾಕ್ಟ್ ಬೇಸಿಸ್‌ನಲ್ಲಿ ಬಂದು ಕೆಲಸ ಮಾಡುವುದಕ್ಕೆ ತಯಾರಿದ್ದಾರೆ, ಡಿ.ಸಿ ಮತ್ತು ಡಿ.ಹೆಚ್.ಓ ಆದೇಶ ನೀಡುವ ಮೂಲಕ ಅವರುಗಳನ್ನು ನೇಮಕ ಮಾಡುತ್ತಾರೆ. ಎರಡನೆಯದಾಗಿ ಯಾರು ಎಂ.ಬಿ.ಬಿ.ಎಸ್ ಕೋರ್ಸ್ ಮುಗಿಸಿಕೊಂಡು ಬರುತ್ತಾರೆ, ಯಾರಿಗೆ ಫೈನ್ ಕೊಡುವುದಕ್ಕೆ ಶಕ್ತಿ ಇಲ್ಲ, ಅಂತಹವರು ನಮ್ಮ ಇಲಾಖೆಯಲ್ಲಿ ಕೆಲವೊಂದು ಕಡೆ ಸೇರಿರುತ್ತಾರೆ. ಆದರೆ ಇಲ್ಲಿ ಸಮಸ್ಯೆ ಏನೆಂದರೆ ಯಾರು permanent ಆಗಿ ಕೆಲಸ ಮಾಡುತ್ತಿದ್ದಾರೆ, ಅವರೂ ಕೂಡ ಪಿ.ಜಿ ಕೋರ್ಸ್‌ಗೆ ಹೋಗುವುದರಿಂದ ಆ ಜಾಗ ಖಾಲಿಯಾಗುತ್ತದೆ, ಕಂಟ್ರ್ಯಾಕ್ಟ್‌ನಲ್ಲಿ ಬಂದ ಮೇಲೆ ಬೇರೆ ಕಡೆ ಹೋಗುವಂತಹ ಅವಕಾಶ ಸಿಗುತ್ತದೆ, ಈ ರೀತಿಯಾದ ಕಾರಣಗಳಿಂದ ಹುದ್ದೆಗಳು ಖಾಲಿಯಾಗಿ ಕೆಲವೊಮ್ಮೆ variation ಆಗುತ್ತದೆ. ಇನ್ನು ವೇತನಕ್ಕೆ ಸಂಬಂಧಪಟ್ಟ ಹಾಗೆ ಹೇಳುವುದಾದರೆ ಯಾರು ಎಂ.ಬಿ.ಬಿ.ಎಸ್. ಡಾಕ್ಟರ್ permanent ಆಗಿ ಕೆಲಸ ಮಾಡುತ್ತಿದ್ದಾರೆ, ಅವರಿಗೆ 56 ಸಾವಿರ ರೂಪಾಯಿ ಕೊಡುತ್ತಿದ್ದೇವೆ. ಯಾರು ಗುತ್ತಿಗೆ ಆಧಾರದ ಮೇಲೆ ಕೆಲಸ ಮಾಡುತ್ತಿದ್ದಾರೆ, 2007ರ ಪ್ರಕಾರ ಅವರಿಗೆ 28 ಸಾವಿರ ರೂಪಾಯಿ ಕೊಟ್ಟಿರುವುದು ಉಂಟು. 2012ರಲ್ಲಿ 6th pay commission ಬಂದಾಗ ಅವರಿಗೆ daily allowance ಇರುವುದನ್ನು cancel ಮಾಡಿ, 14 ಸಾವಿರ ರೂಪಾಯಿ ಕೊಡಿ ಎಂದು ಹೇಳಿ ಒಂದು ಆದೇಶ ಬಂದಿತ್ತು.

ಅಧ್ಯಕ್ಷರು : ನೀವು ಇದೊಂದು ಕಲಿತುಕೊಂಡು ಬಿಟ್ಟಿದ್ದೀರಿ. ಈಗ ಯಾರೂ ಕೂಡ 28–30 ಸಾವಿರ ರೂಪಾಯಿ ಸಂಬಳಕ್ಕೆ ಬರುವುದಿಲ್ಲ. ನೀವು

permanent doctorsಗೆ 57 ಸಾವಿರ ರೂಪಾಯಿ ಕೊಡುತ್ತಿದ್ದೀರಲ್ಲ.

(ಗೊಂದಲ)

ಶ್ರೀ ಯು.ಟಿ. ಖಾದರ್: ಮಾನ್ಯ ಅಧ್ಯಕ್ಷರೆ, ನಾನು ಉತ್ತರ ಹೇಳಿ ಮುಗಿಸುತ್ತೇನೆ.

(ಗೊಂದಲ)

ಅಧ್ಯಕ್ಷರು : ನಮಗೆ ಮುಖ ತೋರಿಸುವುದಕ್ಕೆ ಆಗುತ್ತಿಲ್ಲ, ಗೊತ್ತೇ?

(ಗೊಂದಲ)

ಶ್ರೀ ಯು.ಟಿ. ಖಾದರ್: ನಮಗೂ ಕೂಡ ಆಗುತ್ತಿಲ್ಲ.

ಅಧ್ಯಕ್ಷರು : ಹಾಗಾದರೆ ಏಕೆ ಮಾಡಲ್ಲ?

ಶ್ರೀ ಯು.ಟಿ. ಖಾದರ್ ; ಮಾನ್ಯ ಅಧ್ಯಕ್ಷರೆ, ನನಗೆ ಅವಕಾಶ ಕೊಡಿ ಮಾತನಾಡುತ್ತೇನೆ.

ಅಧ್ಯಕ್ಷರು : Contract basis doctorಗೆ ಸಂಬಳ ಜಾಸ್ತಿ ಕೊಡುವುದಕ್ಕೆ ಏನಾಗುತ್ತದೆ?

ಶ್ರೀ ಯು.ಟಿ. ಖಾದರ್ : ಮಾನ್ಯ ಅಧ್ಯಕ್ಷರೆ, ನನಗೆ ಮಾತನಾಡುವುದಕ್ಕೆ ಅವಕಾಶ ಕೊಡಿ.

ಅಧ್ಯಕ್ಷರು : ಚೆಲುವರಾಯಸ್ವಾಮಿಯವರೆ ಅವರು ಏನು ಹೇಳುತ್ತಾರೆ, ನೋಡೋಣ.

ಶ್ರೀ ಎನ್. ಚೆಲುವರಾಯಸ್ವಾಮಿ : ಪಿಜಿಗೆ ಹೋಗುವವರು, ಖಾಲಿಯಾಗುವವರು ಹೊರಗಡೆ ಹೋಗುವವರು ಸದಾ ನಿಮ್ಮ ಇಲಾಖೆಯಲ್ಲಿ ಇರುತ್ತಾರೆ. ಅದರೆ ನಿರಂತರವಾಗಿ ನೇಮಕಾತಿ ಪ್ರಕ್ರಿಯೆ ಇರಬೇಕು. ಇವತ್ತು ಸಾಮಾನ್ಯ ನೌಕರ ಬೆಂಗಳೂರಿನಲ್ಲಿ 50–60 ಸಾವಿರದಿಂದ ಒಂದು ಲಕ್ಷ ರೂಪಾಯಿಗಳವರೆಗೆ ಸಂಬಳ ತೆಗೆದುಕೊಳ್ಳುತ್ತಾರೆ. ಹಾಗಾಗಿ ಡಾಕ್ಟರಿಗೆ 30–40

ಸಾವಿರ ರೂಪಾಯಿ ಕೊಟ್ಟರೆ ಬರುವುದೇ ಇಲ್ಲ. ಒಂದೂವರೆಯಿಂದ ಎರಡು ವರ್ಷಗಳಾಗುತ್ತಾ ಬರುತ್ತಿದೆ, ಇನ್ನೂ ಕೂಡ ನೇಮಕಾತಿ ಪ್ರಕ್ರಿಯೆ ಪ್ರಾರಂಭವಾಗಿಲ್ಲ. ಇನ್ನು ಈಗ ಕೆಪಿಎಸ್‌ಸಿ ಬರೆಯುತ್ತೇನೆಂದು ಹೇಳುತ್ತೀರಿ. ದಯಮಾಡಿ ಮಾನ್ಯ ಅಧ್ಯಕ್ಷರ ಕಳಕಳಿಯನ್ನು ಅರ್ಥ ಮಾಡಿಕೊಳ್ಳಿ. ನಮ್ಮೆಲ್ಲರ interact ಏನಿದೆ, ನನಗೂ ಇದೆ ಎಂದು ಹೇಳಿದಿರಿ. ನೀವು ಆರು ತಿಂಗಳೊಳಗೆ ಸಂಬಳವನ್ನು ಜಾಸ್ತಿ ಮಾಡಿ ನೇಮಕಾತಿ ಪ್ರಕ್ರಿಯೆ clear ಆಗಬೇಕು. ಆ ರೀತಿ ಖಡಾಖಂಡಿತವಾಗಿ ಉತ್ತರ ಕೊಡಿ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಮಾನ್ಯ ಅಧ್ಯಕ್ಷರೆ, ನಾವು ಸ್ಪಷ್ಟವಾಗಿ ಎರಡು ಉಪ ಪ್ರಶ್ನೆಗಳನ್ನು ಕೇಳುವುದಕ್ಕೆ ಬಯಸುತ್ತೇನೆ. ಮೊದಲನೆಯದಾಗಿ regular doctorsಗೆ ಸಂಬಳ ಕಡಿಮೆ ಎಂದು ಯಾರೂ ಬರುತ್ತಿಲ್ಲ. ಅವರನ್ನು ತುಂಬಿಕೊಳ್ಳುವ ಪ್ರಕ್ರಿಯೆ ಅಂತೂ ತುಂಬಾ ವಿಳಂಬವಾಗುತ್ತಿದೆ. ಹಳ್ಳಿಗಳಲ್ಲಿ ಡಾಕ್ಟರ್‌ಗಳಿಲ್ಲದೆ ಏನೇನು ಸಮಸ್ಯೆಗಳನ್ನು ಅನುಭವಿಸುತ್ತಿದ್ದೇವೆ ಎನ್ನುವುದನ್ನು ನೋಡುತ್ತಿದ್ದೇವೆ. ಸರ್ಕಾರ ಇದನ್ನು priority ಮೇಲೆ ತಕ್ಷಣ regular doctors ತುಂಬಿಕೊಳ್ಳಬೇಕು. ಇವರು ಆರ್ಟಿಕಲ್ 371(ಜೆ), ಆರ್ಥಿಕ ಇಲಾಖೆ, ಕೆಪಿಎಸ್‌ಸಿಯವರು ಆರು ತಿಂಗಳಿನಲ್ಲಿ ನೇಮಕಾತಿ ಪ್ರಕ್ರಿಯೆ ಮಾಡಿಕೊಡುತ್ತೇವೆಂದು ಹೇಳಿದ್ದಾರೆಂದು ಹೇಳಿದರು. ಆರು ತಿಂಗಳಿನವರೆಗೆ ಜೀವ ಇಟ್ಟುಕೊಳ್ಳುವವರು ಯಾರು? ಅಪಘಾತವಾದರೆ ಜೀವ ಹೋದವರನ್ನು ಉಳಿಸುವವರು ಯಾರು? ಹಾಗಾಗಿ ತಕ್ಷಣ ಆದ್ಯತೆ ಮೇಲೆ ಅವರನ್ನು ನೇಮಕಾತಿ ಮಾಡಿ, ಅವರಿಗೆ ಸಂಬಳವನ್ನೂ ಹೆಚ್ಚು ಮಾಡಬೇಕು. ಇದುವರೆಗೂ ಯಾವ ಡಾಕ್ಟರ್‌ಗಳು ಕಂಟ್ರಾಕ್ಟ್ ಬೇಸಿಸ್‌ನಲ್ಲಿ ಕೆಲಸ ಮಾಡುತ್ತಿದ್ದರು. ಅವರಿಗೆ 28 ಸಾವಿರ ರೂಪಾಯಿ ಸಂಬಳ ಕೊಡುತ್ತಿದ್ದರು. ಇವರು ಕಳೆದ ತಿಂಗಳಿನಿಂದ 14 ಸಾವಿರಕ್ಕೆ ಕೆಲಸ ಮಾಡಿದ್ದಾರೆ. ಹಾಗಾಗಿ ಕಂಟ್ರಾಕ್ಟ್ ಡಾಕ್ಟರ್‌ಗಳು ಇದ್ದವರು ಬಿಟ್ಟು ಹೋಗುತ್ತಿದ್ದಾರೆ. ಸರ್ಕಾರ ಕೊಡುವಂತಹ 28 ಸಾವಿರ ಸಂಬಳಕ್ಕೆ ಯಾರು ಬರುತ್ತಾರೆ? ಯಾರೂ ಬರುವುದಿಲ್ಲ. ಈಗ ಇದ್ದವರನ್ನು ಇಟ್ಟುಕೊಳ್ಳುವದಕ್ಕೂ ಆಗುತ್ತಿಲ್ಲ. ಇದ್ದವರೂ

ರಾಜೀನಾಮೆ ಕೊಟ್ಟು ಹೋಗುತ್ತಿದ್ದಾರೆ. ಇಂತಹ ಸ್ಥಿತಿಗೆ ಆರೋಗ್ಯ ಇಲಾಖೆ ಬಂದಿದೆ. ಆರೋಗ್ಯ ಇಲಾಖೆಯ ಆರೋಗ್ಯವೇ ಕೆಟ್ಟುಹೋಗುತ್ತಿದೆ.

ಶ್ರೀ ಎಂ.ಟಿ. ಕೃಷ್ಣಪ್ಪ : Contract basis ಮೇಲೆ ಡಾಕ್ಟರನ್ನು ನೇಮಕಾತಿ ಮಾಡುವುದಕ್ಕೆ 28 ಸಾವಿರ ಅಥವಾ 14 ಸಾವಿರ ರೂಪಾಯಿ ಸಂಬಳ ಕೊಡುವುದು ಬೇಕಾಗಿಲ್ಲ. ಡಾಕ್ಟರಿಗೆ regular salary ಏನು ಬರುತ್ತದೆ, ಅದಕ್ಕಿಂತ 10 ರೂಪಾಯಿ ಕಡಿಮೆ ಕೊಟ್ಟು ಮಾಡಬಹುದು. ಅದು ಕಾನೂನು ಇದೆ.

(ಗೊಂದಲ)

ಅಧ್ಯಕ್ಷರು : ಈಗ ಒಂದು ಕೆಲಸ ಮಾಡೋಣ, ಇದನ್ನು ಅರ್ಧ ಗಂಟೆ ಚರ್ಚೆಗೆ ಹಾಕಿಬಿಡೋಣ. ಇವತ್ತೇ ಹಾಕಿಬಿಡುತ್ತೇನೆ.

ಒಬ್ಬ ಮಾನ್ಯ ಸದಸ್ಯರು : ಅದು ಬೆಳಗಾವಿ ಅಧಿವೇಶನದಲ್ಲಿ ಆಗುವುದಿಲ್ಲ.

ಶ್ರೀ ಯು.ಟಿ. ಖಾದರ್ : ಉತ್ತರ ಆಮೇಲೆ ಕೊಡಲೇ?

ಶ್ರೀ ಎಂ.ಟಿ. ಕೃಷ್ಣಪ್ಪ : Regular docotorsಗೆ ಸಂಬಳ ಏನು ಬರುತ್ತದೆ, ಅದಕ್ಕಿಂತ contract doctorsಗಳಿಗೆ ಹತ್ತು ಅಥವಾ ನೂರು ರೂಪಾಯಿ ಕಡಿಮೆ ಮಾಡಿ ನೇಮಕ ಮಾಡುವುದಕ್ಕೆ ಕಾನೂನಿದೆ.

ಅಧ್ಯಕ್ಷರು : ಇದೆ.

ಶ್ರೀ ಎಂ.ಟಿ. ಕೃಷ್ಣಪ್ಪ : ಮಾನ್ಯ ಅಧ್ಯಕ್ಷರೆ, ತಾವೂ ಕೂಡ ಸಚಿವರಾಗಿ ಕೆಲಸ ಮಾಡಿದ್ದೀರಿ.

ಶ್ರೀ ದಿನೇಶ್ ಗುಂಡೂರಾವ್: ಮಾನ್ಯ ಅಧ್ಯಕ್ಷರೆ, ಮಾನ್ಯ ಆರೋಗ್ಯ ಸಚಿವರು ಪೂರ್ತಿ reply ಕೊಡಲಿ, ಅವರಿಗೆ ಅವಕಾಶ ಕೊಡಿ.

ಅಧ್ಯಕ್ಷರು: ಒಳ್ಳೆಯ ಹುಡುಗರು ಸೇರಿಕೊಂಡಿದ್ದೀರಿ.

ಶ್ರೀ ದಿನೇಶ್ ಗುಂಡೂರಾವ್: ಮಾನ್ಯ ಅಧ್ಯಕ್ಷರೆ, ಹಾಗಲ್ಲ. ಅವರು ಅರ್ಧಂಬರ್ಧ reply ಕೊಟ್ಟಿದ್ದಾರೆ.

ಶ್ರೀ ಕೆ.ಆರ್. ರಮೇಶ್‌ಕುಮಾರ್: ಮಾನ್ಯ ಅಧ್ಯಕ್ಷರೆ, ತಾವು ಧ್ವನಿ ಎತ್ತರಿಸಿ ಮಾತನಾಡಿದಾಗ ಮಂತ್ರಿಯವರಿಗೆ ಚಿಕ್ಕ ವಯಸ್ಸು, ಮೊದಲನೇ ಸಾರಿ ಮಂತ್ರಿಯಾಗಿದ್ದಾರೆ. ಅವರು ಸ್ವಲ್ಪ ಗಾಬರಿಯಾಗುತ್ತಾರೆ, ಅದು ಮನುಷ್ಯ ಸ್ವಭಾವ, ನಾನು ತಮ್ಮಲ್ಲಿ ಏನು ವಿನಂತಿ ಮಾಡಿಕೊಳ್ಳುತ್ತೇನೆಂದರೆ, ತಾವು raise ಮಾಡಿರುವ issue ಬಹಳ pertinent ಆಗಿದೆ. ಇದಕ್ಕೆ half an hour discussion ಏನೂ ಬೇಕಾಗಿಲ್ಲ. Multiple recruitment agencies ಇವರು ಕೆ.ಪಿ.ಎಸ್.ಸಿ. ಒಂದು ಕಡೆ ಎನ್ನುತ್ತಾರೆ, 371(J) ಎಂದು ಕಡೆ ಎಂದು ಹೇಳುತ್ತಾರೆ. ಅದನ್ನೆಲ್ಲಾ ಮಾಡಬೇಡಿ, ಎಲ್ಲಿ ಡಾಕ್ಟರ್‌ಗಳ ಅವಶ್ಯಕತೆ ಇದೆ, ಅದನ್ನು ಮಾಡಿಕೊಳ್ಳುವುದಕ್ಕೆ district levelನಲ್ಲೇ ಒಂದು ಪ್ರಾಧಿಕಾರವನ್ನು create ಮಾಡಿ, regular doctors ಗೆ ಏನು pay scale ಕೊಡುತ್ತೀರಿ, ಅದನ್ನೇ ಕೊಡುವಂಥ ಒಂದು ನಿರ್ಣಯವನ್ನು ಮಾಡಿ. ಇದು ಸ್ವಲ್ಪ ದುಬಾರಿಯಾದರೂ ಕೂಡ ಯಾರೆಲ್ಲಾ ಇರುತ್ತಾರೆ, ಬರುತ್ತಾರೆ. Automatically the vacancies get filled up. Its a very easy thing. ಇದಕ್ಕೆ ಯೋಚನೆ ಮಾಡಬೇಕಷ್ಟೆ, ಮಾನ್ಯ ಮಂತ್ರಿಯವರು ಅಭ್ಯಾಸ ಮಾಡಿಕೊಂಡು ಬಂದಿದ್ದಾರೆ, ಆದರೆ ಸ್ವಲ್ಪ ಗಾಭರಿ ಪಡುತ್ತಾರಷ್ಟೆ.

ಶ್ರೀ ಬಸವರಾಜ್ ಬೊಮ್ಮಾಯಿ: ನಮ್ಮದೊಂದು ಸಲಹೆ ಇದೆ ಸರ್.

ಶ್ರೀ ಕೆ.ಎಂ. ಶಿವಲಿಂಗೇಗೌಡ: ಅದಕ್ಕೆ ಏನಾದರೂ ಕಾನೂನು ತೊಡಕು ಇದ್ದರೆ ಅಸೆಂಬ್ಲಿಗೆ ತನ್ನಿ, ನಾವು ಪಾಸ್ ಮಾಡಿ ಕೊಡುತ್ತೇವೆ.

ಶ್ರೀ ಕೆ.ಆರ್. ರಮೇಶ್‌ಕುಮಾರ್: ಆ ಹುಡುಗನ ಮೇಲೆ ಬಿದ್ದರೆ ಆತ ಏನು ಮಾಡುತ್ತಾನೆ?

ಶ್ರೀ ಜಿ.ಹೆಚ್. ಶ್ರೀನಿವಾಸ್: ಮಾನ್ಯ ಅಧ್ಯಕ್ಷರೆ, ಒಂದು specific question ಆಯುಷ್ ಡಾಕ್ಟರ್‌ಗಳಿಗೆ ಎಷ್ಟು ಸಂಬಳ ಕೊಡುತ್ತಾರೆ?

(ಗೊಂದಲ)

ಅಧ್ಯಕ್ಷರು: ಸ್ವಲ್ಪ ತಾಳಿ, ನಾನು ಏಕೆ ಹೇಳುತ್ತೇನೆಂದರೆ, ಮಾನ್ಯ ಮುಖ್ಯಮಂತ್ರಿಯವರು ಈ ಸದನದಲ್ಲಿ ಮೊದಲನೇ ಬಜೆಟ್ ಮಂಡನೆ ಮಾಡುವಾಗ, ಎಲ್ಲರಿಗೂ ಉತ್ತಮ ಆರೋಗ್ಯವೆಂದು ಹೇಳಿದ್ದಾರೋ, ಇಲ್ಲವೋ? ಇದನ್ನೇ ಉದಾಹರಣೆ ಮಾಡಿ ಅವರಿಗೆ ಪತ್ರ ಬರೆದಿದ್ದೇವೆ, ಇವರಿಗೂ ಪತ್ರ ಬರೆದಿದ್ದೇವೆ. ಅದು ಒಂದು ಪತ್ರವಲ್ಲಿ, ಎರಡು–ಮೂರು ಪತ್ರಗಳನ್ನು ಬರೆದಿದ್ದೇವೆ. ಅದಕ್ಕೆ ನಾನು ಹೇಳುವುದೇನೆಂದರೆ, ಒಬ್ಬ ಮನುಷ್ಯನನ್ನು ಉಳಿಸುವುದು ಎಷ್ಟು ಸುದೈವ ನಮ್ಮದು ಎಂಬುದನ್ನು ತಿಳಿದುಕೊಳ್ಳಿ, ಹಳ್ಳಿ ಭಾಗಗಳಲ್ಲಿ ಎಷ್ಟೂ ತೊಂದರೆ ಇದೆ, ಅದಕ್ಕೋಸ್ಕರ ಒಂದು pay scale fix ಮಾಡಿ ಎಂದು ನಾನು ಮೊದಲಿನಿಂದಲೂ ಹೇಳುತ್ತಿದ್ದೇನೆ.

ಶ್ರೀ ಬಸವರಾಜ ಬೊಮ್ಮಾಯಿ: ಮಾನ್ಯ ಅಧ್ಯಕ್ಷರೆ, ನನ್ನ ಒಂದು ಸಣ್ಣ ಸಲಹೆ ಇದೆ. ಇದಕ್ಕೆ ಒಂದೇ ಒಂದು ಉತ್ತರವೆಂದರೆ, Medical pay scale separate ಆಗಿ ಮಾಡಿದರೆ ಮಾತ್ರ ಡಾಕ್ಟರ್‌ಗಳು ಬರುತ್ತಾರೆ ಅಷ್ಟೇ, ಅದರ ಬಗ್ಗೆ ಚರ್ಚೆ ಬೇಡ. ಎರಡನೆಯದಾಗಿ, ಇವರು ಡಾಕ್ಟರ್‌ಗಳಿಗೆ private practiceಗೆ ಕೆಲವು ವೈದ್ಯಕೀಯದಲ್ಲಿ allow ಮಾಡಿದ್ದಾರೆ. ನನ್ನ ಸಲಹೆ ಏನೆಂದರೆ, ಹಿಂದೆ private ನಲ್ಲಿ honorary doctors ಎಂದು ಹಿಂದೆ ಬರುತ್ತಿದ್ದರು. ಅದಕ್ಕೆ ತಾವು ಏನಾದರೂ ಅವಕಾಶ ಕೊಡುತ್ತಿರಾ?

ಅಧ್ಯಕ್ಷರು: ಮಾನ್ಯ ಬಸವರಾಜ ಬೊಮ್ಮಾಯಿಯವರೆ, ಅದು ಕಷ್ಟವಿದೆ, ವಿಪರೀತ ಗೊಂದಲವಿದೆ.

ಶ್ರೀ ಕೆ.ಆರ್. ರಮೇಶ್‌ಕುಮಾರ್: Please ಸಾಕು, ಇದುವರೆಗೂ ಅವರ ಕಾಟ ನಮಗೆ ಆಗಿರುವುದೇ ಸಾಕು, ಇಲ್ಲಿರುವವರೇ private service ಹೋಗುತ್ತಿದ್ದಾರೆ, ಇನ್ನು private ನವರು honorary service ಎಂದರೆ ಕಷ್ಟ. private practice ಎಂದರೆ ಅದು ತಿರುಪತಿಯೇ. ಬೇಡಿ...

(ಗೊಂದಲ)

ಶ್ರೀ ಬಸವರಾಜ ಬೊಮ್ಮಾಯಿ: ಸರ್ಕಾರಿ ಡಾಕ್ಟರ್‌ಗಳೇ ಹೊರಗಡೆ private practice ಮಾಡುತ್ತಾರೆ. ಇಲ್ಲಿ ಬಂದಿರುವವರನ್ನು divert ಮಾಡಿಕೊಂಡು ಹೋಗುತ್ತಾರೆ.

ಅಧ್ಯಕ್ಷರು: ಆಯಿತು, ಡಾ॥ ಸುಧಾಕರ್ ಏನು ಹೇಳಿ.

ಶ್ರೀ ಕೆ.ಆರ್. ರಮೇಶ್ ಕುಮಾರ್: Sri Basavaraj, let us make the process of recruitment more simpler. That is what required. Process of recruitment ಏನು ಇದೆ, ಅದನ್ನು ಸರಳಗೊಳಿಸಿ, ಅವರಿಗೆ ವೇತನವನ್ನು ಹೆಚ್ಚು ಕೊಡಿ, ಆಕರ್ಷಣೆ ಕೊಡಿ.

ಅಧ್ಯಕ್ಷರು: ಹೌದು, ತಾವು ಹೇಳುವುದು correct ಇದೆ. ಇದಕ್ಕೆ ಏನೆಂದರೆ, ನೇರವಾಗಿ Department recruitment ಮಾಡುವುದಕ್ಕೆ ಅವಕಾಶವಿದೆ. ಇದನ್ನು ಸ್ವಲ್ಪ ಅಮೆಂಡ್‌ಮೆಂಟ್ ಮಾಡಿಕೊಂಡು merit is the basis ಎಂದು ಮಾಡಿದರೆ, ಒಂದೆರಡು ತಿಂಗಳಲ್ಲಿ ಮಾಡಿ ಬಿಸಾಕಬಹುದು, ಮಾನ್ಯ ಸುಧಾಕರ್‌ರವರೆ ಹೇಳಿ.

ಡಾ॥ ಕೆ.ಸುಧಾಕರ್: ಮಾನ್ಯ ಅಧ್ಯಕ್ಷರೆ, ಈಗ ಜಿಲ್ಲಾ ಆಸ್ಪತ್ರೆಗಳಲ್ಲಿ M.D., Physicians ಯಾರೂ ಸಿಗುತ್ತಿಲ್ಲ. ಬರೀ ಎಂ.ಬಿ.ಬಿ.ಎಸ್. ಡಾಕ್ಟರ್‌ಗಳಾದರೆ ಸಿಗುತ್ತಾರೆ, ಆ ಎಂ.ಬಿ.ಬಿ.ಎಸ್. ಡಾಕ್ಟರ್‌ಗಳನ್ನು ಎಲ್ಲಾ ಜಿಲ್ಲಾ ಆಸ್ಪತ್ರೆಗಳಲ್ಲಿ ನೇಮಕ ಮಾಡುವ ಪ್ರಕ್ರಿಯೆ ಆರಂಭವಾಗಲಿ, at least ಅವರಾದರೂ ಅಲ್ಲಿಗೆ ಬರುತ್ತಾರೆ.

ಅಧ್ಯಕ್ಷರು: ಈಗ ನೀವು ಡಾಕ್ಟರ್ ಆಗಿದ್ದೀರಿ, ಮಾನ್ಯ ರಮೇಶ್‌ಕುಮಾರ್ ಮತ್ತೆ ಎಲ್ಲರಿಗೂ ಹೇಳುವುದೇನೆಂದರೆ, ಈ ದುರಂತ ಆಗುವುದಕ್ಕೆ ಕಾರಣ ಡಾ॥ ವಿ.ಎಸ್.ಆಚಾರ್ಯರವರು Medical Education Minister ಆಗಿದ್ದ ಸಂದರ್ಭದಲ್ಲಿ ಮೆಡಿಕಲ್ ಕಾಲೇಜ್‌ಗಳಲ್ಲಿ ಕೆಲಸ ಮಾಡುವ ಡಾಕ್ಟರ್‌ಗಳಿಗೆ ವಿಶೇಷವಾದಂಥ pay scale ಮಾಡಿದರು. ಅವರು ಎಲ್ಲಾ

ಅಲ್ಲಿಗೆ ಹೋದರು, ನಾನು ಆಗಲೇ ಅವರಿಗೆ ಇದನ್ನು ಮಾಡಬೇಡಿ ಎಂದು ಹೇಳಿದೆ. ಈಗಲೂ ನಾನು ಅದನ್ನೇ ಹೇಳುತ್ತೇನೆ, ಅದಕ್ಕೆ ಸಮಾನಾಂತರವಾದಂಥ pay scale ಮಾಡಿ ಎಂದು ಹೇಳಿದರೆ, ಇವರು ಕಥೆಯನ್ನು ಹೇಳುತ್ತಾರೆ.

ಶ್ರೀ ಕೆ.ಎಂ. ಶಿವಲಿಂಗೇಗೌಡ: ಮಾನ್ಯ ಅಧ್ಯಕ್ಷರೆ, ತಾವು ಹೇಳುವ ಮಾತು ನೂರಕ್ಕೆ ನೂರು ಸತ್ಯವಿದೆ. ಆ ವೇತನ ತಾರತಮ್ಯದಿಂದ ಡಾಕ್ಟರ್‌ಗಳು ಬರುತ್ತಿಲ್ಲ, ಆ ತಾರತಮ್ಯವನ್ನು ಸರಿಪಡಿಸಿ.

ಅಧ್ಯಕ್ಷರು: ಇಲ್ಲಿ ಯಾರೋ advice ಮಾಡುತ್ತಾರೆ ಕೇಳುತ್ತಾರೆ, ತಾವು cabinetಗೆ ತೆಗೆದುಕೊಂಡು ಬನ್ನಿ, ಏಕೆ ಆಗುವುದಿಲ್ಲ? It is your duty, your authority.

ಶ್ರೀ ಯು.ಟಿ. ಖಾದರ್: ಸರಿ ಸಾರ್.

ಅಧ್ಯಕ್ಷರು: ಇದು ಫೈನಾನ್ಸ್‌ಗೆ ಏಕೆ ಹೋಗಬೇಕು? Pay scale ಅನ್ನು cabinet ನಲ್ಲಿ ನಿರ್ಧಾರ ಮಾಡಿ.

ಶ್ರೀ ಹೆಚ್. ಆಂಜನೇಯ: ಮಾನ್ಯ ಅಧ್ಯಕ್ಷರೆ, Doctors recruitment ಕಳೆದ 10 ವರ್ಷಗಳಿಂದಲೂ ಆಗಿಲ್ಲ.

ಅಧ್ಯಕ್ಷರು: ಮಾನ್ಯ ಆಂಜನೇಯವರೆ, ಒಂದೂವರೆ ವರ್ಷ ಕಳೆದು ಹೋಯಿತು. ಇನ್ನು ಮೂರೂವರೆ ವರ್ಷಗಳು ಮಾತ್ರ ಉಳಿದಿರುವುದು.

ಶ್ರೀ ಎಂ.ಟಿ. ಕೃಷ್ಣಪ್ಪ: ಒಬ್ಬ linemanಗೆ ₹ 20,000/– ಕೊಡುತ್ತಾರೆ, doctor ಗೆ ಏಕೆ ಕೊಡೋಲ್ಲ?

(ಗೊಂದಲ)

ಶ್ರೀ ಹೆಚ್.ಡಿ. ಕುಮಾರಸ್ವಾಮಿ: ಮಾನ್ಯ ಅಧ್ಯಕ್ಷರೆ, ..

ಅಧ್ಯಕ್ಷರು: ಇದೇ ಜಾಸ್ತಿಯಾಯಿತು, ಇನ್ನೂ questions ಇದೆ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ: ಮಾನ್ಯ ಅಧ್ಯಕ್ಷರೆ, ನಾನು ಚರ್ಚೆ ಮಾಡುವುದಿಲ್ಲ. ತಾವು ಡಾ॥ ಆಚಾರ್ಯರವರ subject ಹೇಳಿದ್ದೀರಿ, ಅದಕ್ಕೆ ಒಂದು clarification ಕೊಡುತ್ತೇನೆ. ಈಗ ನಮ್ಮ ಸದನದಲ್ಲಿ ಕಳೆದ ಒಂದು ವರ್ಷದಿಂದ ಚರ್ಚೆ ನಡೆಯುತ್ತಿರುವಂಥದ್ದು ಪ್ರತಿ ಜಿಲ್ಲೆಗೊಂದು Medical College ಅನ್ನು ತೆಗೆಯಬೇಕೆಂದು ಇದೆ. ಇವರು ಮೆಡಿಕಲ್ ಕಾಲೇಜು ಮಾಡಬೇಕೆಂದು ಹೊರಟಿದ್ದಾರೆ. ಇಲ್ಲಿ ಪರಿಸ್ಥಿತಿ ಏನೆಂದರೆ, ಅಲ್ಲಿ ಮೆಡಿಕಲ್ ಕಾಲೇಜ್‌ಗೆ teaching staff ಅನ್ನು ತೆಗೆದುಕೊಳ್ಳಬೇಕೆಂದರೆ, ನೀವು ಸಂಬಳ ಹೆಚ್ಚಿಗೆ ಕೊಡದಿದ್ದರೆ ಅಲ್ಲಿಗೆ ಯಾರೂ ಬರುವುದಿಲ್ಲ. All India Medical Council ನಿಮಗೆ ಎಲ್ಲಿಂದ permission ಕೊಡುತ್ತಾರೆ? ಹಾಗಾಗಿ ಇಲ್ಲಿ ಪ್ರಶ್ನೆ ಆರು ಕಾಲೇಜುಗಳನ್ನು ಏನು ಕಟ್ಟಿದ್ದೇವೆ, ಅಲ್ಲಿ ಯಾರು ಲೆಕ್ಚರರ್ಸ್ ಇದ್ದಾರೆ?

ಅಧ್ಯಕ್ಷರು: ಆಗ ಮಾನ್ಯ ಸಿದ್ದರಾಮಯ್ಯನವರೇ ಹಣಕಾಸಿನ ಸಚಿವರಾಗಿದ್ದರು.

ಶ್ರೀ ಹೆಚ್.ಡಿ. ಕುಮಾರಸ್ವಾಮಿ: ಆದ್ದರಿಂದ ಈಗ ಪ್ರಶ್ನೆ ಏನೆಂದರೆ, ಅಲ್ಲಿ ಮೆಡಿಕಲ್ ಕಾಲೇಜ್‌ಗೆ ಒಂದು ರೀತಿ, ಇಲ್ಲಿ ಡಾಕ್ಟರ್‌ಗಳಿಗೆ ನೀವು 20,000/– 25,000/– ರೂ.ಗಳನ್ನು ಕೊಟ್ಟರೆ ಡಾಕ್ಟರ್‌ಗಳು ಯಾರೂ ಬರುವುದಿಲ್ಲ. ಆದ್ದರಿಂದ ಈ ಬಗ್ಗೆ ಸರ್ಕಾರದಲ್ಲಿ ತೀರ್ಮಾನ ಮಾಡಬೇಕಾಗುತ್ತದೆ. ನೀವೇ ನೀಡಿದ ಹೇಳಿಕೆಯಲ್ಲಿ ಒಂದು ಲಕ್ಷ ರೂ.ಗಳನ್ನು ಕೊಡುವುದಕ್ಕೆ ತಯಾರಿದ್ದೇವೆ, ಯಾರೂ ಬರುವುದಕ್ಕೆ ತಯಾರಿಲ್ಲವೆಂದು ಹೇಳಿದ್ದೀರಿ.

ಅಧ್ಯಕ್ಷರು: Pay scale ಎಲ್ಲಿದೆ? ನನಗೆ ತೋರಿಸಿ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ: ಮಾನ್ಯ ಅಧ್ಯಕ್ಷರೆ, ನನ್ನ ಹತ್ತಿರ paper cutting ಇದೆ.

ಅಧ್ಯಕ್ಷರು: ಅದು ಇದೆ, ಒಂದು ಲಕ್ಷ ರೂ.ಗಳನ್ನು ಕೊಡುವ pay scale ಇದೆಯೇ ಅದನ್ನು ನನಗೆ ತೋರಿಸಿ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ: ಹೇಳಿಕೆ ಕೊಟ್ಟಿದ್ದಾರೆ.

ಡಾ॥ ಕೆ. ಸುಧಾಕರ್: ಮಾನ್ಯ ಅಧ್ಯಕ್ಷರೆ, ಒಂದು ಲಕ್ಷ ರೂ.ಗಳು ಮಾಡಿದರೆ ಖಂಡಿತ ಬರುತ್ತಾರೆ.

ಶ್ರೀ ವಾಸು: ಮಾನ್ಯ ಅಧ್ಯಕ್ಷರೆ, Finance Departmentನವರು approval ಮಾಡುವುದಿಲ್ಲ. ಬಹುಶಃ ತಾವು ಹೇಳಿದ ಮಾತು, All India Council for Technical Education (AICT) ನವರ pay scale ಏನಿತ್ತು, ಅದನ್ನೇ Medical Council of India ದವರು follow ಮಾಡಿ, Medical college ನಲ್ಲಿ faculty member ಆಗುವಂಥವರಿಗೆ ಆ scale ಅನ್ನು ಕೊಡಬೇಕೆಂಬ AICTಯಲ್ಲಿ ಒಂದು condition ಹಾಕಿದರು. ಅದೇ ರೀತಿಯಲ್ಲಿ Medical Council of India ಕೂಡ AICT scale ಕೊಡಬೇಕೆಂದು follow ಮಾಡಿದ್ದಾರೆ. ಇದರ ಜೊತೆಗೆ Medical Council of India ಸಮೇತ ಇವತ್ತು AICT scale ಗಿಂತ ಮೆಡಿಕಲ್ ಕಾಲೇಜ್‌ನಲ್ಲಿ ಕಡಿಮೆ ಕೊಡುತ್ತಿದ್ದಾರೆ. ಆದ್ದರಿಂದ ಅದು ಒಂದು ಹೋರಾಟ ನಡೆಯುತ್ತಿದೆ.

ಅಧ್ಯಕ್ಷರು: ಇದಕ್ಕೆ ಸಂಬಂಧಪಟ್ಟಂತೆ ಹೇಳಿ.

ಶ್ರೀ ವಾಸು: UGC Scale ಇತ್ತು, ಆದ್ದರಿಂದ Medical College ಅನ್ನು separate ಆಗಿ treat ಮಾಡಿದ್ದಾರೆ.

ಅಧ್ಯಕ್ಷರು: ಆಯಿತು, ಈಗ ಏನು ಮಾಡಬೇಕೆಂಬುದನ್ನು ಹೇಳಿ.

ಶ್ರೀ ವಾಸು: ಈಗ ಡಾಕ್ಟರ್‌ಗಳಿಗೂ AICT scale ಕೊಟ್ಟರೆ ಹೆಚ್ಚಿಗೆ ಡಾಕ್ಟರ್‌ಗಳು ಬರುತ್ತಾರೆ, AICT scale ಕೊಡಿ.

ಅಧ್ಯಕ್ಷರು: ಆಯಿತು, ಮಾನ್ಯ ಮಂತ್ರಿಯವರೆ, ಉತ್ತರ ಹೇಳಿ.

ಶ್ರೀ ಯು.ಟಿ. ಖಾದರ್: ಮಾನ್ಯ ಅಧ್ಯಕ್ಷರೆ, ಇವತ್ತು ಹಿರಿಯ ನಾಯಕರು ಮತ್ತು ಹತ್ತು, ಹದಿನೈದು ಶಾಸಕ ಮಿತ್ರರು ಬೇರೆ ಬೇರೆ ರೀತಿಯ ಪ್ರಶ್ನೆಗಳನ್ನು ಕೇಳಿದ್ದಾರೆ. ನಾನು ಎಲ್ಲಾ ಹಿರಿಯ ನಾಯಕರಿಗೆ ಮತ್ತು ಶಾಸಕ

ಮಿತ್ರರಿಗೆ ಹೇಳುವುದೇನೆಂದರೆ, ನಾನು ಮಂತ್ರಿಯಾಗಿದ್ದರೂ ನಾನು ಕೂಡ ಮನುಷ್ಯನಾಗಿದ್ದೇನೆ. ನನಗೂ ಉತ್ತರ ಕೊಡುವುದಕ್ಕೆ 15 ನಿಮಿಷ ಸಮಯ ಕೊಡಿ, ಅಲ್ಲಿಯವರೆಗೂ ತಾಳ್ಮೆಯಿಂದ ಕೇಳಬೇಕೆಂದು ಹೇಳಲಿಚ್ಚಿಸುತ್ತೇನೆ.

ಅಧ್ಯಕ್ಷರು: ಹಾಗಾದರೆ ನಾಳೆ ಈ ವಿಷಯವನ್ನು ತೆಗೆದುಕೊಳ್ಳೋಣ.

ಶ್ರೀ ಸಿ.ಟಿ. ರವಿ: ಮಾನ್ಯ ಅಧ್ಯಕ್ಷರೆ, Medical Education Minister ಹೇಳಲಿ.

(ಗೊಂದಲ)

ಶ್ರೀ ಯು.ಟಿ. ಖಾದರ್: ಮಾನ್ಯ ಅಧ್ಯಕ್ಷರೆ, ನಾನು ಮಾತನಾಡುವುದಕ್ಕೆ ಅವಕಾಶ ಕೊಡದಿದ್ದರೆ ಕಷ್ಟವಾಗುತ್ತದೆ.

ಅಧ್ಯಕ್ಷರು: ಮಾನ್ಯ ಖಾದರ್‌ರವರೆ, ನಾಳೆ ಉತ್ತರ ಹೇಳಿ.

ಶ್ರೀ ಜಿ.ಹೆಚ್. ಶ್ರೀನಿವಾಸ್: ಮಾನ್ಯ ಅಧ್ಯಕ್ಷರೆ, ಇದಕ್ಕೆ ಸಂಬಂಧಪಟ್ಟಂತೆ ಪ್ರಶ್ನೆ ಕೇಳುತ್ತೇನೆ. ಮಾನ್ಯ ಮಂತ್ರಿಯವರು ನಾಳೆಯೇ ಉತ್ತರ ಕೊಡಲಿ, ಆಯುಷ್ ಯೋಜನೆಯಡಿ ಡಾಕ್ಟರ್‌ಗಳಿಗೆ ಎಷ್ಟು ವೇತನ ಕೊಡುತ್ತಾರೆ?

ಅಧ್ಯಕ್ಷರು: ಒಂದು ನಿಮಿಷ ಇರಿ, ಈ ವಿಷಯವನ್ನು ನಾಳೆ half an hour discussionಗೆ ಹಾಕಿ, ನಾಳೆಗೆ ಉತ್ತರ ತಯಾರು ಮಾಡಿಕೊಂಡು ಬನ್ನಿ.

ಶ್ರೀ ಯು.ಟಿ. ಖಾದರ್: ಮಾನ್ಯ ಅಧ್ಯಕ್ಷರೆ, ಇವತ್ತು ಉತ್ತರ ಕೊಡುತ್ತೇನೆ.

ಅಧ್ಯಕ್ಷರು: ಇವತ್ತೇ ಉತ್ತರ ಕೊಡುತ್ತೀರಾ? ಹಾಗಾದರೆ ಮಧ್ಯಾಹ್ನ ತೆಗೆದುಕೊಳ್ಳೋಣ.

(ಗೊಂದಲ)

ಶ್ರೀ ದಿನೇಶ್ ಗುಂಡೂರಾವ್: ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಯವರಿಗೆ ಉತ್ತರ ಕೊಡಲು ಐದು ನಿಮಿಷ ಕಾಲಾವಕಾಶ ಕೊಡಿ.

(ಗೊಂದಲ)

ಅಧ್ಯಕ್ಷರು: ಎಲ್ಲರೂ youngster ಇದ್ದೀರಿ, ಹೇಗೆ ಮಾಡಬೇಕು?

ಶ್ರೀ ಕೆ.ಆರ್. ರಮೇಶ್‌ಕುಮಾರ್: ಮಾನ್ಯ ಅಧ್ಯಕ್ಷರೆ, ಇದು ಏನಾಗುತ್ತದೆಂದರೆ ನಾಳೆ mediaದಲ್ಲಿ it will come in very bad line. Let him gıve hıs explanation.

ಅಧ್ಯಕ್ಷರು: ಆಯಿತು, ಕೊನೆಗೆ ಉತ್ತರ ಕೊಡಿ.

ಶ್ರೀ ಸಿ.ಟಿ. ರವಿ: ಮಾನ್ಯ ಅಧ್ಯಕ್ಷರೆ, ಈಗ media ಕ್ಕೆ ಒಳ್ಳೆಯ ಉತ್ತರ ಕೊಡಬೇಕೆಂತಲೋ ಜನರಿಗೆ ಡಾಕ್ಟರ್ ಬೇಕಂತಲೋ?

(ಗೊಂದಲ)

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್: ಮಾನ್ಯ ಅಧ್ಯಕ್ಷರೆ, ಪ್ರಶ್ನೋತ್ತರದಲ್ಲಿ ಮಂತ್ರಿಗಳು ನೀಡುವ ಉತ್ತರಕ್ಕೆ ತಡೆ ಮಾಡುವ ಯಾವ ಸಂಪ್ರದಾಯವೂ ಇಲ್ಲ. ಅವರಿಗೆ ಪೂರ್ಣ ಉತ್ತರ ಕೊಡುವುದಕ್ಕೆ ಅವಕಾಶವಿದೆ.

(ಗೊಂದಲ)

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್: ಪ್ರಶ್ನೆ ಕೇಳುವುದಕ್ಕೆ ನಿಮಗೆ ಎಷ್ಟು ಅವಕಾಶವಿದೆಯೋ ಹಾಗೆ ಪೂರ್ಣ ಉತ್ತರ ಹೇಳುವುದಕ್ಕೆ ಅವರಿಗೂ ಅವಕಾಶವಿದೆ. ಉತ್ತರ ಕೊಡಲು ಅವಕಾಶ ಕೊಡದಿದ್ದರೆ ಹೇಗೆ?

(ಗೊಂದಲ)

ಶ್ರೀ ದಿನೇಶ್ ಗುಂಡೂರಾವ್: ನಿಮ್ಮ ಕಾಲದಲ್ಲಿ ಏನೂ ಮಾಡುವುದಕ್ಕೆ

ಆಗದೇ, ಈಗ ಇಲ್ಲಿ ಬಂದು ರಾಜಕೀಯ ಮಾಡಬೇಡಿ.

(ಗೊಂದಲ)

ಡಾ॥ ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್: ಉತ್ತರ ಕೊಡಲು ಅವಕಾಶ ಕೊಡದಿದ್ದರೆ ಹೇಗೆ?

(ಗೊಂದಲ)

ಶ್ರೀ ದಿನೇಶ್ ಗುಂಡೂರಾವ್: ನಾಗರಾಜುರವರೇ, ನಿಮ್ಮ ಕಾಲದಲ್ಲಿ ಏನು ಮಾಡಿದಿರಿ?

(ಗೊಂದಲ)

ಅಧ್ಯಕ್ಷರು: ಆಯಿತು, ನಾಗರಾಜು, ವಕಾಲತ್ತು ಹಾಕುವುದು ಬೇಡ, ಕುಳಿತುಕೊಳ್ಳಿ. ನೀವು ಆಮೇಲೆ ಉತ್ತರ ಕೊಡಿ. ಈಗ ಮುಂದಿನ ಪ್ರಶ್ನೆ. ಆರ್.ಅಶೋಕ್‌ರವರದ್ದು.

ಶ್ರೀ ಯು.ಟಿ. ಖಾದರ್: ಮಾನ್ಯ ಅಧ್ಯಕ್ಷರೆ, ಈಗಲೇ ಉತ್ತರ ಕೊಡುತ್ತೇನೆ. ಇವತ್ತು ಕೇವಲ ಮೀಡಿಯಾದವರಿಗಾಗಿ ಉತ್ತರ ಕೊಡುವಂಥ ಅಗತ್ಯತೆ ನಮಗೇನೂ ಬಂದಿಲ್ಲ. ನಾವೇನಿದ್ದರೂ ಜನಸಾಮಾನ್ಯರಿಗೆ ಬೇಕಾಗಿರುವಂಥ ಕೆಲಸ ಮಾಡುವ ಮುಖಾಂತರ ಮೀಡಿಯಾದವರಿಗೆ ಉತ್ತರ ಕೊಡುತ್ತೇವೆ. ಸದಸ್ಯರು ಬೇರೆಬೇರೆ ವಿಚಾರಗಳಲ್ಲಿ ಪ್ರಶ್ನೆ ಕೇಳಿದ್ದಾರೆ. ಕೊರತೆ ಇರುವಂಥ ವೈದ್ಯರ ಹುದ್ದೆಗಳು ತುಂಬುವುದು ಕೆ.ಪಿ.ಎಸ್.ಸಿ. ಮುಖಾಂತರವೇ ಏಕೆ ಆಗಬೇಕೆಂದರೆ, ಸಂವಿಧಾನಬದ್ಧವಾದಂಥ ಒಂದು ಸಂಸ್ಥೆ ಇರುವಾಗ, ನಾವು direct recruitment ಮಾಡಿದರೆ, ನಾಳೆ ಅವಕಾಶ ಸಿಕ್ಕದರೆ ಕೆಲವರು ಅದರ ವಿರುದ್ಧ ಕೋರ್ಟಿಗೆ ಹೋದರೆ ಕೋರ್ಟ್ ಅದನ್ನು stuck down ಮಾಡಿದರೆ ಮತ್ತೆ ಆರು ತಿಂಗಳು ವಿಳಂಬವಾಗುವಂಥ ಸಂದರ್ಭವಿರುತ್ತದೆ. ಆದ್ದರಿಂದ, ಸ್ವಲ್ಪ ತಡವಾದರೂ ಚಿಂತೆಯಿಲ್ಲ, ನ್ಯಾಯಬದ್ಧವಾಗಿಯೇ,

ಕಾನೂನುಬದ್ಧವಾಗಿಯೇ ಮಾಡೋಣ ಎಂದು ಮಾಡುತ್ತಿದ್ದೇವೆ.

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಇವರ ಈ ವಾದವೇ ಸರಿಯಿಲ್ಲ.

ಅಧ್ಯಕ್ಷರು: ಸ್ವಲ್ಪ ತಾಳಿ, ಅವರು ಹೇಳಲಿ.

(ಗೊಂದಲ)

ಶ್ರೀ ಕೃಷ್ಣಬೈರೇಗೌಡ: ಅವರು ಏನು ಹೇಳುತ್ತಾರೆ ಎಂದು ನೀವು ಮೊದಲು ಕೇಳಿ.

(ಗೊಂದಲ)

ಡಾ॥ ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್: ನೀವು ಅಧಿಕಾರದಲ್ಲಿ ಇದ್ದಿರಲ್ಲ, ಆಗ ಏಕೆ ಮಾಡಲಿಲ್ಲ?

(ಗೊಂದಲ)

ಶ್ರೀ ರಾಮಲಿಂಗಾರೆಡ್ಡಿ: ಉತ್ತರ ಕೇಳುವಷ್ಟು ತಾಳ್ಮೆ ಇರಲಿ ನಿಮಗೆ.

(ಗೊಂದಲ)

ಶ್ರೀ ಸಿ.ಟಿ. ರವಿ: ಅಲ್ಲಿಯವರೆಗೂ ನಮ್ಮ ರಾಜ್ಯದಲ್ಲಿ ಯಾರಿಗೂ ಕಾಯಿಲೆ ಬರುವುದು ಬೇಡ, ಆಕ್ಸಿಡೆಂಟ್‌ಗಳು ಆಗುವುದೂ ಬೇಡ ಎಂದು ಭಗವಂತನಲ್ಲಿ ಮನವಿ ಮಾಡುತ್ತೇನೆ.

(ಗೊಂದಲ)

ಅಧ್ಯಕ್ಷರು: ರವಿಯವರೇ ಸ್ವಲ್ಪ ತಾಳಿ, ಅವರು ಹೇಳಲಿ.

(ಗೊಂದಲ)

ಶ್ರೀ ದಿನೇಶ್ ಗುಂಡೂರಾವ್: ನಿಮಗೆ ಸಮಸ್ಯೆ ಬಗೆಹರಿಯಬೇಕೇ,

ಬೇಡವೇ? ನೀವಂತೂ ಮಾಡಲಿಲ್ಲ, ನಿಮ್ಮ ಕಾಲದಲ್ಲಿ ಏನೂ ಮಾಡಲಿಲ್ಲ.

(ಗೊಂದಲ)

ಶ್ರೀ ಕೃಷ್ಣಬೈರೇಗೌಡ: ನಿಮಗೆ solution ಬೇಕಾಗಿಲ್ಲ, ಬರೀ ತರಲೆ ಮಾಡಬೇಕಾಗಿದೆ ಅಷ್ಟೇ.

(ಗೊಂದಲ)

ಶ್ರೀ ದಿನೇಶ್ ಗುಂಡೂರಾವ್: ಅಧ್ಯಕ್ಷರೆ, ಅವರನ್ನು ಕುಳಿತುಕೊಳ್ಳಲು ಹೇಳಿ.

ಅಧ್ಯಕ್ಷರು: ಆಯಿತು, ಹೇಳುತ್ತೇನೆ. ಅವರು ಉತ್ತರ ಕೊಡಲಿ.

(ಗೊಂದಲ)

ಶ್ರೀ ಕೆ.ಜೆ. ಬೋಪಯ್ಯ: ನಮ್ಮ ಕಾಲದ್ದೆಲ್ಲ ಏಕೆ ಹೇಳುತ್ತೀರಿ? ಈಗ ನೀವು ಮಾಡಿ. ಇಲ್ಲದಿದ್ದರೆ ಈ ಕಡೆ ಬಂದು ಕುಳಿತುಕೊಳ್ಳಿ.

(ಗೊಂದಲ)

ಅಧ್ಯಕ್ಷರು: ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ. ಬೊಮ್ಮಾಯಿಯವರೇ, ಏನಿದು? ಸೀನಿಯರ್ ಮೆಂಬರ್ ಆಗಿ ನೀವೂ ಹೀಗೆ ಮಾಡುತ್ತಿದ್ದೀರಿ. ಅವರು ಉತ್ತರ ಕೊಡುವುದು ಕೊಡಲಿ. ನೀವು ಉತ್ತರ ಹೇಳಿ.

ಶ್ರೀ ಯು.ಟಿ. ಖಾದರ್: ಕೊರತೆಯಿರುವಂಥ 559 ವೈದ್ಯರ ಹುದ್ದೆಗಳನ್ನು ತುಂಬಿ ಕೊರತೆಯನ್ನು ನೀಗಿಸಲು ಈಗಾಗಲೇ permanent ನೇಮಕಾತಿ ಮಾಡಲು ಕೆ.ಪಿ.ಎಸ್.ಸಿ.ಗೆ ಬರೆದಿದ್ದೇವೆ. ಅಲ್ಲಿಯವರೆಗೆ ಈ ಹುದ್ದೆಗಳಿಗೆ contract basis ಮೇಲೆ ನೇಮಕ ಮಾಡಲು ಜಿಲ್ಲಾಧಿಕಾರಿಗಳು ಮತ್ತು D.H.O.ಗಳು ಜಿಲ್ಲಾ ಮಟ್ಟದಲ್ಲಿ interview ಕರೆದು ನೇಮಕ ಮಾಡಿಕೊಳ್ಳಲು ಅವಕಾಶ ಮಾಡಿಕೊಟ್ಟಿದ್ದೇವೆ. Contract basis . ಮೇಲೆ ಮೂರು ವರ್ಷಗಳ ಕಾಲ ಕೆಲಸ ಮಾಡುವವರನ್ನು permanent ಮಾಡುವಂಥ ಒಂದು ಯೋಜನೆಯನ್ನು ಹಾಕಿಕೊಂಡಿದ್ದೇವೆ.

ಅಧ್ಯಕ್ಷರು: ಅವರಿಗೆ ಏನು ಸಂಬಳ ಕೊಡುತ್ತೀರಿ?

ಶ್ರೀ ಯು.ಟಿ. ಖಾದರ್: ಅವರ ಸಂಬಳ 26,000 ರೂಪಾಯಿಗಳಿತ್ತು. ಅದಕ್ಕೆ ಡಿ.ಎ. ಸೇರಿಸಿ 31,000 ರೂಪಾಯಿಗಳನ್ನು ಕೊಡಬೇಕು ಎಂದು ತೀರ್ಮಾನಿಸಿದ್ದು, ಅದು ಆರ್ಥಿಕ ಇಲಾಖೆಗೆ ಹೋಗಿದೆ. ಅದರ ಜೊತೆಗೆ, ನಾವು ಮಾನ್ಯ ಮುಖ್ಯಮಂತ್ರಿಗಳ ಜೊತೆ ಚರ್ಚೆ ಮಾಡಿದ್ದು, 31,000 ಇರುವುದನ್ನು 40,000 ರೂಪಾಯಿಗಳಿಗೆ ಏರಿಸಬೇಕು ಮತ್ತು ಎಂ.ಬಿ.ಬಿ.ಎಸ್.ರವರ ವೇತನವನ್ನು 70,000 ರೂಪಾಯಿ ಮಾಡಬೇಕು ಎಂದು ನಮ್ಮ ಇಲಾಖೆಯಿಂದ ಈಗಾಗಲೇ ಪ್ರಸ್ತಾವನೆ ಆರ್ಥಿಕ ಇಲಾಖೆಗೆ ಹೋಗಿದೆ.

ಅಧ್ಯಕ್ಷರು: ಕಡತ Finance Departmentಗೆ ಹೋಗಿ ಎಷ್ಟು ದಿವಸವಾಗಿದೆ?

ಶ್ರೀ ಯು.ಟಿ. ಖಾದರ್: Finance Departmentಗೆ ಹೋಗಿ ಆರು ತಿಂಗಳಾಯಿತು.

ಅಧ್ಯಕ್ಷರು: ಆರು ತಿಂಗಳೇ? ಅಲ್ಲೇ ಇಟ್ಟುಕೊಳ್ಳಿ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಅದು ಹೋಯಿತು, ಏಕೆಂದರೆ ಅದು cold storage.

ಅಧ್ಯಕ್ಷರು: ಅದು ಮರಿ ಹಾಕುತ್ತದೆ, ಅಲ್ಲೇ ಇಟ್ಟುಕೊಳ್ಳಿ. ಇವರದ್ದು ಪಾರದರ್ಶಕ ಆಡಳಿತವಂತೆ.

ಶ್ರೀ ಯು.ಟಿ. ಖಾದರ್: ಅದನ್ನು ಕ್ಯಾಬಿನೆಟ್ ಮುಂದೆ ತರಬೇಕು ಎಂದು ಹೇಳುತ್ತಿದ್ದೀರಿ. Finance Departmentನವರು reject ಮಾಡಿದರೆ ತಕ್ಷಣ ಅದನ್ನು ಕ್ಯಾಬಿನೆಟ್‌ಗೆ ತರುತ್ತೇವೆ. Finance Departmentನವರು ಅದನ್ನು reject ಮಾಡದ ಕಾರಣ ಅದನ್ನು ಕ್ಯಾಬಿನೆಟ್‌ಗೆ ತರಲು ಆಗುತ್ತಿಲ್ಲ ಎನ್ನುವುದನ್ನು ಹೇಳಲು ಇಚ್ಛಿಸುತ್ತೇನೆ.

ಅಧ್ಯಕ್ಷರು: ರಮೇಶ್‌ಕುಮಾರ್‌ರವರೇ ಕೇಳಿ, Finance Departmentಗೆ ಹೋಗಿ ಆರು ತಿಂಗಳಾಗಿದೆಯಂತೆ. ಇದು ಪಾರದರ್ಶಕ ಆಡಳಿತ.

ಶ್ರೀ ಕೆ.ಆರ್. ರಮೇಶ್‌ಕುಮಾರ್: ಅವರಿಗೆ ಅನುಭವದ ಕೊರತೆಯಿದೆ. We will resolve it.

ಶ್ರೀ ಜಗದೀಶ್ ಶೆಟ್ಟರ್: ಯಾವುದನ್ನು ತುರ್ತಾಗಿ ಮಾಡಬೇಕು ಅಂಥ ಫೈಲ್‌ಗಳು ಆರಾರು ತಿಂಗಳು ಅಡ್ಡಾಡುತ್ತವೆಂದರೆ ಏನು ಅರ್ಥ? ಹಣಕಾಸು ಇಲಾಖೆ ಮುಖ್ಯಮಂತ್ರಿಗಳ ಬಳಿ ಇದೆ.

Mr. SPEAKER: I can't tolerate certain things. ನನ್ನ ಕ್ಷೇತ್ರದಲ್ಲಿ ಒಂದೂವರೆ ವರ್ಷದಿಂದ 16ರ ಪೈಕಿ 11ರಲ್ಲಿ ಡಾಕ್ಟರ್‌ಗಳಿಲ್ಲ.

ಶ್ರೀ ಕೆ.ಆರ್. ರಮೇಶ್ ಕುಮಾರ್: ದೇಶಪಾಂಡೆಯವರೇ, some of you should get up and give the reply on behalf of the Government. ಪಾಪ ಆತ ಇನ್ನೂ ಹುಡುಗ, ಆತನಿಗೆ experience ಇಲ್ಲ.

ಶ್ರೀ ಜಗದೀಶ್ ಶೆಟ್ಟರ್: ಫೈಲ್ ಆರಾರು ತಿಂಗಳು Finance Departmentನಲ್ಲಿ ಅಡ್ಡಾಡುತ್ತಿದ್ದರೆ ಸರ್ಕಾರ ಹೇಗೆ ನಡೆಯಬೇಕು? ಹಣಕಾಸು ಇಲಾಖೆ ಮುಖ್ಯಮಂತ್ರಿಗಳ ಬಳಿ ಇದೆ. ಇದರಲ್ಲಿ ರಾಜಕೀಯ ಇಚ್ಛಾಶಕ್ತಿಯೂ ಬೇಕು.

ಅಧ್ಯಕ್ಷರು: ಎಲ್ಲರ ಕ್ಷೇತ್ರದಲ್ಲೂ ಈ ಸಮಸ್ಯೆಗಳಿವೆ. ಆದ್ದರಿಂದ ನೀವು ಸ್ವಲ್ಪ ಗರಂ ಆಗುವುದು ಕಲಿತುಕೊಳ್ಳಿ.

ಶ್ರೀ ಜಗದೀಶ್ ಶೆಟ್ಟರ್: ಆರಾರು ತಿಂಗಳು ಈ ಫೈಲ್ ಹಣಕಾಸು ಇಲಾಖೆಯಲ್ಲಿ ಅಡ್ಡಾಡುತ್ತದೆ ಕ್ಲಿಯರ್ ಆಗುವುದಿಲ್ಲ ಎಂದರೆ ಏನು ಮಾಡಬೇಕು, ದೇಶಪಾಂಡೆಯವರೇ? ಇದರ ಅರ್ಥವೇನು? ಸರ್ಕಾರ ಹೇಗೆ ನಡೆಯುತ್ತಿದೆ? ತುರ್ತಾಗಿ ಯಾವುದಕ್ಕೆ ಕ್ರಮ ಕೈಗೊಳ್ಳಬೇಕೋ ಅದನ್ನು ನೀವು ಮಾಡುತ್ತಿಲ್ಲ.

ಶ್ರೀ ಪ್ರಮೋದ್ ಮಧ್ವರಾಜ್: ನೀವಿದ್ದಾಗ ಏನು ಮಾಡಿದಿರಿ?

(ಗೊಂದಲ)

ಶ್ರೀ ಆರ್.ವಿ. ದೇಶಪಾಂಡೆ: ಮಾನ್ಯ ಸಭಾಧ್ಯಕ್ಷರೆ, ತಾವು ಹೇಳಿದ ಹಾಗೆ ಈ ಸಮಸ್ಯೆ ಎಲ್ಲ ಕಡೆಯೂ ಇದೆ. ಆದಷ್ಟು ಬೇಗನೆ ಇದನ್ನು ಬಗೆಹರಿಸುತ್ತೇವೆ. ಪುನಃ ನಿಮ್ಮ ಕಡೆಯಿಂದ, ಆಸ್ಪತ್ರೆಗಳಲ್ಲಿ ಡಾಕ್ಟರ್‌ಗಳಿಲ್ಲ ಎಂದು ಹೇಳುವುದಕ್ಕೆ ಆಸ್ಪದವಿಲ್ಲದಂತೆ ಇತ್ಯರ್ಥ ಪಡಿಸುತ್ತೇವೆ.

ಅಧ್ಯಕ್ಷರು: ನಿಮಗೆ ಒಂದು ಕಿವಿಮಾತು ಹೇಳುತ್ತೇನೆ. ಕಾಂಟ್ರ್ಯಾಕ್ಟ್ ವೈದ್ಯರಿಗೂ ಕೂಡ ನೀವು ಕನಿಷ್ಟ 50 ರಿಂದ 60 ಸಾವಿರ ರೂಪಾಯಿ ಕೊಡುವಂಥ ಕೆಲಸ ಮಾಡಿ. ರೆಗ್ಯುಲರ್ ಡಾಕ್ಟರ್‌ಗಳಿಗೆ ಕೊಡುವುದರಲ್ಲಿ 5% reduce ಮಾಡಿ ಕೊಟ್ಟರೆ ಮುಗಿಯಿತು. ಇದು ಬಹಳ ಮುಖ್ಯವಾದ ವಿಷಯ. ನೀವೇ ನೋಡಿದ್ದೀರಿ, ನಮ್ಮ ಮಲೆನಾಡು ಪ್ರದೇಶದಲ್ಲಿ ಒಂದು ಹಳ್ಳಿಯಲ್ಲಿ ಡಾಕ್ಟರ್ ಇಲ್ಲವೆಂದರೆ ಅಲ್ಲಿನ ಜನಗಳ ಕಥೆ ಏನಾಗಬೇಕು ಹೇಳಿ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಮುಖ್ಯಮಂತ್ರಿಗಳು ಇಚ್ಛಾಶಕ್ತಿಯನ್ನು ತೋರಿಸಿ ನಿರ್ಣಯವನ್ನು ತೆಗೆದುಕೊಳ್ಳಬೇಕು. ಇಲ್ಲದಿದ್ದರೆ, ಇವರು ಇನ್ನೇನು ಉತ್ತರ ಹೇಳುತ್ತಾರೆ?

(ಗೊಂದಲ)

ಅಧ್ಯಕ್ಷರು: ಆಯಿತು, ಸಾಕು ಬಿಡಿ. ದೇಶಪಾಂಡೆಯವರು ಮಾಡುತ್ತೇವೆಂದು ಹೇಳಿದ್ದಾರೆ, ನೋಡೋಣ.

ಶ್ರೀ ಡಿ.ಎನ್. ಜೀವರಾಜ್: ಅದು dead body. Finance Departmentಗೆ ಹೋದರೆ ವಾಪಸ್ಸು ಬರುವುದಿಲ್ಲ.

ಅಧ್ಯಕ್ಷರು: ಕುಳಿತುಕೊಳ್ಳಿ ಮಹರಾಯರೆ, Finance Department ನವರು ಇನ್ನು ಮೂರು ದಿವಸದೊಳಗೆ ಈ ಫೈಲನ್ನು ವಾಪಸ್ಸು ಕಳುಹಿಸದಿದ್ದರೆ ನಾನೇ Finance Departmentಗೆ ಹೋಗಬೇಕಾಗುತ್ತದೆ.

ಶ್ರೀ ಯು.ಟಿ. ಖಾದರ್: ಒಂದು ಲಕ್ಷ ರೂಪಾಯಿಗಳನ್ನು ಕೊಡುವ ವಿಚಾರವನ್ನು ಮಾನ್ಯ ಶಾಸಕರು ಹೇಳಿದರು. Contract basisನಲ್ಲಿ NRHM ಅಡಿಯಲ್ಲಿ ಬರುವ ತಜ್ಞ ವೈದ್ಯರಿಗೆ ಒಂದು ಲಕ್ಷ ರೂಪಾಯಿಗಳ ವೇತನವನ್ನು ಕೊಡಲು ಈಗಲೂ ನಾವು ತಯಾರಿದ್ದೇವೆ.

ಅಧ್ಯಕ್ಷರು: NRHMನಲ್ಲೇ, ಈಗ ಅದೊಂದು ಹಿಡಿದುಕೊಂಡು ಬಿಟ್ಟಿದ್ದೀರಿ.

ಶ್ರೀ ಯು.ಟಿ. ಖಾದರ್: NRHMರವರ ಒಪ್ಪಿಗೆ ಪಡೆದುಕೊಂಡಿದ್ದೇವೆ.

(ಗೊಂದಲ)

ಅಧ್ಯಕ್ಷರು: ಖಾದರ್‌ರವರೇ ನಿಮ್ಮ ಕಾರ್ಯದರ್ಶಿ ನಿಮಗೆ misguide ಮಾಡುತ್ತಾರೆ. Don't rely on these. Be careful.

ಶ್ರೀ ಯು.ಟಿ. ಖಾದರ್: ಮಾನ್ಯ ಅಧ್ಯಕ್ಷರೆ, ಅದನ್ನು ನಾನು ಒಪ್ಪುವುದಿಲ್ಲ. ಯಾವ ಅಧಿಕಾರಿಯೂ ನಮ್ಮನ್ನು misguide ಮಾಡಲಿಲ್ಲ. ಯಾವುದೇ misguide ಮಾಡಿಲ್ಲ ಎನ್ನುವುದನ್ನು ನಾನು ಸ್ಪಷ್ಟವಾಗಿ ಹೇಳಲು ಇಚ್ಛಿಸುತ್ತೇನೆ.

ಅಧ್ಯಕ್ಷರು: ಆಯಿತು. ಈಗ ಮುಂದಿನ ಪ್ರಶ್ನೆ, ಅಶೋಕ್‌ರವರು.

ಶ್ರೀ ಸಿ.ಟಿ. ರವಿ: ಈಗ ಸರ್ಕಾರದ ಹಣೆಬರಹ ಗೊತ್ತಾಯಿತು.

(ಗೊಂದಲ)

ಅಧ್ಯಕ್ಷರು: ಆಯಿತು ಬಿಡಿ, ದಯವಿಟ್ಟು ಸಾಕು. Please, please.

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಒಂದು ವಿಷಯವೆಂದರೆ, ತಾವೇ ಹಣಕಾಸು ಇಲಾಖೆಗೆ ಹೋಗಬೇಕಾಗುತ್ತದೆ ಎಂದು ಹೇಳಿದರೂ ಒಬ್ಬ

ಹಿರಿಯ ಸಚಿವರೂ ಅದನ್ನು ಗಂಭೀರವಾಗಿ ತೆಗೆದುಕೊಂಡು ಉತ್ತರ ಕೊಡುತ್ತಿಲ್ಲ.

(ಗೊಂದಲ)

ಅಧ್ಯಕ್ಷರು: ಸಾಕು, ಸ್ವಲ್ಪ ತಾಳಿ. Argument heard, judgement is reserved. Please wait.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಒಂದೇ ಒಂದು ವಿಷಯವೆಂದರೆ, ತಾವೇ ಹಣಕಾಸು ಇಲಾಖೆಗೆ ಹೋಗುತ್ತೇನೆ ಎಂದು ಹೇಳಿದರೂ ಹಿರಿಯ ಸಚಿವರುಗಳು ಒಬ್ಬರೂ ಎದ್ದು ನಿಲ್ಲಲಿಲ್ಲ. ಹೆಚ್.ಕೆ.ಪಾಟೀಲ್‌ರವರಿದ್ದಾರೆ, ದೇಶಪಾಂಡೆಯವರಿದ್ದಾರೆ, ಒಬ್ಬರೂ ಎದ್ದು ನಿಲ್ಲಲಿಲ್ಲ.

(ಗೊಂದಲ)

ಅಧ್ಯಕ್ಷರು: ಎಲ್ಲರೂ ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಯು.ಟಿ. ಖಾದರ್: ಇವರಿಗೆ 10 ವರ್ಷಗಳು ಮಾಡಲು ಆಗಲಿಲ್ಲ. ಈಗ ಒಂದು ವರ್ಷದಲ್ಲಿ ನಮ್ಮನ್ನು ಕೇಳುತ್ತಿದ್ದಾರೆ, ಇವರಿಗೆ ನಾಚಿಕೆಯಾಗುವುದಿಲ್ಲವೇ?

(ಗೊಂದಲ)

ಶ್ರೀ ಆರ್.ವಿ. ದೇಶಪಾಂಡೆ: ಮಾನ್ಯ ಅಧ್ಯಕ್ಷರೆ, ಈಗಾಗಲೇ ಆರೋಗ್ಯ ಸಚಿವರು ಉತ್ತರ ಕೊಟ್ಟಿದ್ದಾರೆ. ತಾವು ಸಹ ಹೇಳಿದ್ದೀರಿ. ನಮಗೂ ನೋವಿದೆ. ತಾವು ಹೇಳಿದ್ದೀರಲ್ಲ. ನಾವು ತಮ್ಮ ಆದೇಶ ಪಾಲನೆ ಮಾಡುತ್ತೇವೆ. ಆದಷ್ಟು ಬೇಗ ಕ್ರಮ ತೆಗೆದುಕೊಳ್ಳುತ್ತೇವೆ. ತಾವು ಹೇಳಿರುವುದು ತಪ್ಪು ಎಂದು ಹೇಳುವುದಿಲ್ಲ. ಡಾಕ್ಟರುಗಳೇ ಇಲ್ಲವೆಂದರೆ ಕಷ್ಟ ಎಷ್ಟಾಗುತ್ತದೆ ಎಂದು ನಮಗೂ ಅರಿವು ಇದೆ. ಹಾಗಾಗಿ ಗೌರವಾನ್ವಿತ ಸಚಿವರು ಸರಿಯಾಗಿ ಉತ್ತರ ಕೊಟ್ಟಿದ್ದಾರೆ. ಸ್ವಲ್ಪ co-operate ಮಾಡಿ. We will take a decision.

ಅಧ್ಯಕ್ಷರು: O.K., thank you.

(ಗೊಂದಲ)

ಅಧ್ಯಕ್ಷರು: ಬೊಮ್ಮಾಯಿಯವರೆ, ಸಾಕು ಬಿಡಿರಿ.

(ಗೊಂದಲ)

ಶ್ರೀ ಯು.ಟಿ. ಖಾದರ್: ಅವಕಾಶ ಕೊಡಿ. ಮಾಡಿ ತೋರಿಸುತ್ತೇವೆ.

ರಾಜ್ಯದಲ್ಲಿ ಎಬೋಲಾ ಖಾಯಿಲೆ ಕಾಣಿಸಿಕೊಂಡಿರುವುದು

118 (746); ಶ್ರೀ ಅಶೋಕ ಆರ್. (ಪದ್ಮನಾಭ ನಗರ)

ಅ) ರಾಜ್ಯದಲ್ಲಿ ಎಬೋಲಾ ಎಂಬ ಖಾಯಿಲೆಯ ಸೋಂಕು ಕಾಣಿಸಿಕೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಈ ಕಾಯಿಲೆ ಸೋಂಕಿನಿಂದ ರಾಜ್ಯದಲ್ಲಿ ಚಿಕಿತ್ಸೆ ಪಡೆಯುತ್ತಿರುವ ರೋಗಿಗಳ ಸಂಖ್ಯೆ ಎಷ್ಟು;

ಇ) ಈ ಎಬೋಲಾ ಖಾಯಿಲೆಯಿಂದ ಏನಾದರೂ ಚಿಕಿತ್ಸೆ ಪಲಕಾರಿಯಾಗದೇ ಸಾವು-ನೋವು ಸಂಭವಿಸಿದೆಯೇ:

ಈ) ಹಾಗಿದ್ದಲ್ಲಿ, ಈ ಖಾಯಿಲೆಯನ್ನು ತಡೆಗಟ್ಟಲು ಕೈಗೊಂಡಿರುವ ಕ್ರಮವೇನು?

ಶ್ರೀ ಯು.ಟಿ. ಖಾದರ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ) ರಾಜ್ಯದಲ್ಲಿ ಎಬೋಲಾ ಎಂಬ ಖಾಯಿಲೆಯ ಸೋಂಕು ಕಾಣಿಸಿಕೊಂಡಿರುವುದಿಲ್ಲ. ಆದರೆ ರಾಜ್ಯದಲ್ಲಿ 'ಎಬೋಲಾ' ಖಾಯಿಲೆಯ ಸೋಂಕಿನ ಸಂಪೂರ್ಣ ಮಾಹಿತಿ ಇದೆ.